ಇ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವತಿಯಿಂದ ಟ್ರಾನ್ಸ್ ಫಾರ್ಮರ್ ಗಳನ್ನು ಸ್ಥಾಪಿಸುವಾಗ ಭಾರತೀಯ ವಿದ್ಯುತ್ ನಿಯಮಾವಳಿ 1956ರ ನಿಯಮಗಳ ಉಲ್ಲಂಘನೆ ಆಗಿರುವುದಿಲ್ಲ ಬೆಂಗಳೂರಿನ ರಾಜಾಜಿನಗರ ಹಾಗೂ ಇತರೆ ಪ್ರದೇಶಗಳಲ್ಲಿ ಒತ್ತುವರಿ ಮಾಡಿ ಕಟ್ಟಡಗಳನ್ನು ನಿರ್ಮಾಣ ಮಾಡುತ್ತಿರುವುದರಿಂದ ಅಥವಾ ನಿರ್ಮಿಸಿರುವುದರಿಂದ ಹಾಗೂ ಕಿರಿದಾದ ರಸ್ತೆಗಳಿರುವುದರಿಂದ ಕೆಲವು ಪ್ರಕರಣಗಳಲ್ಲಿ ದೂರುಗಳು ಬಂದಿರುತ್ತವೆ

ಈ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಗೆ ಬಂದ ಇಂತಹ ಎಲ್ಲಾ ದೂರುಗಳನ್ನು ಆಯಾ ಅರ್ಜಿಯ ಅರ್ಹತೆ ಹಾಗೂ ಕಂಪನಿಯ ನಿಯಮಗಳನ್ನು ಅನುಸರಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಬೆಸ್ಕಾಂ ಕಟ್ಟಡಗಳ ಸಾಮೀಪ್ಯತೆಯನ್ನು ಗಮನದಲ್ಲಿಟ್ಟುಕೊಂಡು ಭಾರತೀಯ ವಿದ್ಯುತ್ ನಿಯಮಾವಳಿಗಳ ಪ್ರಕಾರ ಟ್ರಾನ್ಸ್ ಫಾರ್ಮರ್‌ಗಳನ್ನು ಸ್ಥಾಪಿಸುತ್ತಿದೆ ಹೀಗಿದ್ದರೂ ಸಹ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಬೇಕೆಂದು ಕಟ್ಟಡಗಳ ನಿರ್ಮಾಣದಾರರು ಕೋರಿದಲ್ಲಿ ನಿರ್ಮಾಣದಾರರು ಕಟ್ಟಡಗಳನ್ನು ನಿರ್ಮಾಣ ಮಾಡುವಾಗ ಮಾಡಿರುವ ಲೋಪದೋಷಗಳಿಂದಾಗಿ ಸುರಕ್ಷಿತ ಅಂತರವು ಕಡಿಮೆಯಾಗಿ ಟ್ರಾನ್ಸ್ ಫಾರ್ಮರನ್ನು ಸ್ಥಳಾಂತರಿಸಬೇಕಾದಲ್ಲಿ ಟ್ರಾನ್ಸ್ ಫಾರ್ಮರ್‌ನ ಸ್ಥಳಾಂತರಿಸುವ ವೆಚ್ಚವನ್ನು ಕಟ್ಟಡ ನಿರ್ಮಾಣದಾರರೇ ಭರಿಸಬೇಕಾಗುತ್ತದೆ

ಉ) ಸಾರ್ವಜನಿಕ ಸ್ಥಳಗಳಲ್ಲಿ ಟ್ರಾನ್ಸ್‌ಫಾರ್ಮರ್, ವಿದ್ಯುತ್ ಕಂಬ ಹಾಗೂ ವಿದ್ಯುತ್ ಮಾರ್ಗಗಳು ಅಪಾಯಕಾರಿ ಸ್ಥಿತಿಯಲ್ಲಿದ್ದು, ಇದರಿಂದ ಸಾರ್ವಜನಿಕರ ಸುರಕ್ಷತೆಗೆ ಧಕ್ಕೆ ಉಂಟಾಗುವುದು ಕಂಡು ಬಂದಲ್ಲಿ ಇವುಗಳನ್ನು ಸ್ಥಳಾಂತರಿಸಲಾಗುವುದು ಮತ್ತು ಸರಿಪಡಿಸಲಾಗುವುದು ಒಂದು ವೇಳೆ ಟ್ರಾನ್ಸ್ ಫಾರ್ಮರ್ ಪಕ್ಕದಲ್ಲಿ ಹೊಸದಾಗಿ ಕಟ್ಟಡ ನಿರ್ಮಾಣವಾಗಿ, ನಿರ್ಮಾಣದಾರರು ಟ್ರಾನ್ಸ್ ಫಾರ್ಮರ್‌ನ್ನು ಸ್ಥಳಾಂತರಿಸಲು ಕೋರಿದಲ್ಲಿ ಟ್ರಾನ್ಸ್‌ಫಾರ್ಮರ್‌ನ ಸ್ಥಳಾಂತರಿಸುವ ವೆಚ್ಚವನ್ನು ಸಂಬಂಧಪಟ್ಟ ನಿರ್ಮಾಣದಾರರು ಭರಿಸಿದ ನಂತರವೇ, ಟ್ರಾನ್ಸ್‌ಫಾರ್ಮರನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು

389 (662) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ಸಹಕಾರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದ ಸಚಿವಾಲಯ ಗೃಹ ನಿರ್ಮಾಣ ಸಂಘದ ಪದಾಧಿಕಾರಿಗಳು ಸಂಘದ ಹಣವನ್ನು ದುರುಪಯೋಗ ಪಡಿಸಿ ಜಮೀನನ್ನು ಕೊಂಡು ಮತ್ತೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿರುವುದು ನಿಜವೇ,

ಆ) ಸದರಿ ಸಂಘವು ಹೊಂದಿರುವ ಜಮೀನು ಎಷ್ಟು ಹಾಗೂ ಅದರಲ್ಲಿ ಭೂ ಪರಿವರ್ತನೆಯಾಗಿರುವುದು ಎಷ್ಟು,

ಇ) ಈ ಜಮೀನಿನಲ್ಲಿ ವಿಂಗಡಿಸಿದ ನಿವೇಶನಗಳ ಸಂಖ್ಯೆ ಹಾಗೂ ಎಷ್ಟು ಸದಸ್ಯರಿಗೆ ಯಾವ ಯಾವ ಅಳತೆಯ ನಿವೇಶನ ಹಂಚಿಕೆ ಮಾಡಲಾಗಿದೆ (ಸದಸ್ಯವಾರು ವಿವರ ನೀಡುವುದು),

ಈ) ಸಂಘವು 1995ರಲ್ಲಿ ಭೂ ಮಾಲೀಕರಿಗೆ ಕರಾರಿನಂತೆ ಪೂರ್ಣ ಹಣ ಪಾವತಿಸಿದ್ದು ಸಂಘದ ವಶದಲ್ಲಿದ್ದ ಹಾಗೂ ಸಂಘವು ಅಭಿವೃದ್ಧಿಪಡಿಸಿದ ಬೆಂಗಳೂರು ಉತ್ತರ ತಾಲ್ಲೂಕಿನ ಶ್ರೀಗಂಧದ ಕಾವಲ್ ಗ್ರಾಮದ ಸರ್ವೆ ನಂ 34/7ರ 5 1 ಎಕರೆ ಜಮೀನನ್ನು ಸಂಘದ ಪದಾಧಿಕಾರಿಗಳು ಭೂ ಮಾಲೀಕರೊಂದಿಗೆ ಶಾಮೀಲಾಗಿ ರೂ 8 10 ಕೋಟಿ ಬೆಲೆ ಬಾಳುವ ಜಮೀನನ್ನು ಕೇವಲ ರೂ 35 00 ಲಕ್ಷಗಳನ್ನು ಭೂ ಮಾಲೀಕರಿಂದ ಪಡೆದು ಅವರಿಗೆ ಸಂಘವು ಜಮೀನನ್ನು ಬಿಟ್ಟು ಕೊಟ್ಟಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ,

ಉ) ಹಾಗಿದ್ದಲ್ಲಿ ಇದರಿಂದಾಗಿ ಸದಸ್ಯರುಗಳು ನಿವೇಶನ ಪಡೆಯುವಲ್ಲಿ ವಂಚಿತರಾಗಿಲ್ಲವೆ,

ಊ) ಕರ್ನಾಟಕ ಸ್ಟೇಟ್ ಕೋ–ಆಪರೇಟಿವ್ ನೀತಿ ನಿಯಮಗಳಡಿಯಲ್ಲಿ ಇದಕ್ಕೆ ಅವಕಾಶವಿದೆಯೇ,

ಋ) ಈ ಬಗ್ಗೆ ಸರ್ಕಾರಕ್ಕೆ ದೂರು ನೀಡಲಾಗಿದ್ದು ಸಂಘದ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಕರ್ನಾಟಕ ಸರ್ಕಾರದ ಸಚಿವಾಲಯ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಇದರ ಪದಾಧಿಕಾರಿಗಳು ಸಂಘದ ಹಣವನ್ನು ದುರುಪಯೋಗಪಡಿಸಿರುವ ಬಗ್ಗೆ ಲೆಕ್ಕಪರಿಶೋಧನಾ ವರದಿಗಳಲ್ಲಿ ನಮೂದಾಗಿರುವುದಿಲ್ಲ ಆದರೆ ಸಂಘದ ಹೆಸರಿಗೆ ನೋಂದಣಿಯಾದ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಶ್ರೀಗಂಧದ ಕಾವಲ್ ಗ್ರಾಮದ ಸರ್ವೆ ನಂ 34/7ರ 5 ಎಕರೆ 01 ಗುಂಟೆ ಜಮೀನನ್ನು ಸಂಘದ ವತಿಯಿಂದ ಮಾರಾಟ ಮಾಡಿರುವುದು ನಿಜಾಂಶವಾಗಿದೆ

ಆ) ಸಂಘವು ಒಟ್ಟು 18 ಎಕರೆ 09 ಗುಂಟೆ ಜಮೀನು ಪಡೆದಿದ್ದು ಈ ಪೈಕಿ 12 ಎಕರೆ 34 ಗುಂಟೆ ಜಮೀನು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಕಛೇರಿಯಿಂದ ದಿನಾಂಕ 16 5 01 ರಂದು ಭೂ ಪರಿವರ್ತನೆ ಮಾಡಿಸಿ ಆದೇಶ ಪಡೆದಿರುತ್ತಾರೆ ಉಳಿದಂತೆ ವಿಶೇಷ ಭೂಸ್ವಾಧೀನಾಧಿಕಾರಿಗಳ ಕಛೇರಿಯಿಂದ ಅವಾರ್ಡ್ ಆಗಿ 03 ಎಕರೆ 37 ಗುಂಟೆ ಜಮೀನು ಸಂಘಕ್ಕೆ

ಸ್ವಾಧೀನವಾಗಿರುತ್ತದೆ ಉಳಿದಂತೆ 01 ಎಕರೆ 18 ಗುಂಟೆ ಜಮೀನು ಭೂ ಪರಿವರ್ತನೆಯಾಗಿರುವುದಿಲ್ಲ

ಇ) ಸದರಿ ಬಡಾವಣೆಯಲ್ಲಿ 30x40, 30x50 ಮತ್ತು 40x60 ರ ಒಟ್ಟು 262 ನಿವೇಶನಗಳನ್ನು ರಚನೆ ಮಾಡಿರುತ್ತಾರೆ ಈ ಪೈಕಿ 199 ಅಂದರೆ 30x40ರ 166 ನಿವೇಶನಗಳು, 30x50 ರ 04 ನಿವೇಶನಗಳು ಮತ್ತು 40x 60ರ 29 ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ

ಈ) ಸಂಘವು ಸಂಘದ ಹೆಸರಿಗೆ ನೋಂದಣಿಯಾಗಿದ್ದ ಸರ್ವೆ ನಂ 34/7ರ 5 ಎಕರೆ 01 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಈ ಬಾಬ್ತು ರೂ 35 00 ಲಕ್ಷಗಳನ್ನು ಸಂಘವು ಪಡೆದಿರುತ್ತದೆ ಇದರ ಮಾರುಕಟ್ಟೆ ಬೆಲೆ ತಿಳಿದಿರುವುದಿಲ್ಲ

ಉ) ನಿವೇಶನ ಪಡೆಯುವಲ್ಲಿ ಸದಸ್ಯರು ವಂಚಿತರಾಗಿರುತ್ತಾರೆ

ಊ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಾನೂನುಗಳಲ್ಲಿ ಇದಕ್ಕೆ ಅವಕಾಶ ಇರುವುದಿಲ್ಲ

ಋ) ಈ ಬಗ್ಗೆ ಕ್ರಮ ಕೈಕೊಳ್ಳಲು ಶಾಸನಬದ್ಧ ವಿಚಾರಣೆ ನಡೆಸಿ ಜವಾಬ್ದಾರಿ ನಿಗದಿಪಡಿಸಿ ತದನಂತರ ಕ್ರಮ ಜರುಗಿಸಬೇಕಾಗಿದೆ ಶಾಸನಬದ್ಧ ವಿಚಾರಣೆಗೆ ಆದೇಶ ಹೊರಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

390 (496) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) . ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿ ಆಯ್ಕೆ ಮಾಡಿದ ಗ್ರಾಮಗಳು ಯಾವುದು,

ಆ) ಆಯ್ಕೆ ಮಾಡಿದ ಈ ಗ್ರಾಮಗಳಲ್ಲಿ ವಿದ್ಯುದೀಕರಣ ಕೆಲಸ ಪ್ರಾರಂಭವಾಗಿದೆಯೇ,

ಇ) ಹಾಗಿದ್ದಲ್ಲಿ ಈ ಗ್ರಾಮಗಳಿಗೆ ವಿದ್ಯುದೀಕರಣ ಸೌಲಭ್ಯ ಒದಗಿಸಲು ಸರಕಾರ ಕೈಗೊಂಡ ಕ್ರಮವೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಒಟ್ಟು 120 ಗ್ರಾಮ/ದಲಿತ ಬಡ್ತಿ/ಜನತಾಕಾಲೋನಿ/ಆಶ್ರಯ ಕಾಲೋನಿ ಗಳನ್ನು ವಿದ್ಯುದೀಕರಣ ಆಯ್ಕೆ ಮಾಡಲಾಗಿದ್ದು, ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ